KARNATAKA LALITAKALA ACADEMY
“NATIONAL SEMIN

KARNATAKA LALITAKALA ACADEMY AND MANGALORE UNIVERSITY
N.G.PAVANJE CHAIR IN FINE ART
“NATIONAL SEMINAR”

KARNATAKA LALITAKALA ACADEMY

ಮಂಗಳೂರು ವಿಶ್ವವಿದ್ಯಾನಿಲಯ Mangalore University (Accredited by NAAC with 'A' Grade)
ಎನ್.ಜಿ.ಪಾವಂಜೆ ಲಲಿತಕಲಾ ಪೀಠ N. G. Pavanje Chair in Fine Arts
ಕರ್ನಾಟಕ ಲಲಿತಕಲಾ ಅಕಾಡೆಮಿ Karnataka Lalithkala Academy



N.G. Pavanje

ರಾಷ್ಟ್ರೀಯ ವಿಚಾರ ಸಂಕಿರಣ
NATIONAL SEMINAR

ಯುವ ಕಲಾವಿದರ ಕಲಾ ಪ್ರದರ್ಶನ
ART EXHIBITION FOR YOUNG ARTISTS

ದಿನಾಂಕ : 6.4.2018 ಮತ್ತು 7.4.2018 ಸ್ಥಳ: ರೋಶನಿ ನಿಲಯ, ಮಂಗಳೂರು

ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ
Art and Cultural Heritage of Coastal Karnataka and Evolution of Modern Art in Coastal Districts of Karnataka

ಶುಕ್ರವಾರ, 6.4.2018 ಬೆಳಗ್ಗೆ 09.30 ಉದ್ಘಾಟನೆ

ಉದ್ಘಾಟಕರು ಅನಸೂಯ ಪಾವಂಜೆ	ಮಾಜಿ ಕಾರ್ಯದರ್ಶಿಗಳು ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಪುರಸ್ಕೃತರು
ಗೌರವ ಅತಿಥಿಗಳು ಶ್ರೀ ಪಿ. ಎಸ್. ಪುಂಚಿತ್ತಾಯ ಶ್ರೀ ರಮೇಶ್ ರಾವ್	ಹಿರಿಯ ಕಲಾವಿದರು, ಕಾಸರಗೋಡು ಅಧ್ಯಕ್ಷರು, ಆರ್ಟಿಸ್ಟ್ ಫೋರಂ(ರಿ), ಉಡುಪಿ
ಆಶಯ ನುಡಿ ಪ್ರೊ. ಎಂ. ಜೆ. ಕಮಲಾಕ್ಷಿ	ಅಧ್ಯಕ್ಷರು, ಕಲಅ, ಬೆಂಗಳೂರು
ದಿಕ್ಸೂಚಿ ಭಾಷಣ ಡಾ. ಪುಂಡಿಕೈ ಗಣಪಯ್ಯ ಭಟ್	ಹಿರಿಯ ಸಂಶೋಧಕರು, ಮೂಡುಬಿದಿರೆ
ಅಧ್ಯಕ್ಷತೆ ಪ್ರೊ. ಕೆ. ಭೈರಪ್ಪ, FRSC	ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

ನಿಮಗಿದು ಆದರದ ಸ್ವಾಗತ

ಪ್ರೊ. ಕೆ. ಕೃಷ್ಣ ಶರ್ಮ
ಸಂಯೋಜಕರು ಎನ್.ಜಿ.ಪಾವಂಜೆ ಲಲಿತಕಲಾ ಪೀಠ

ಪ್ರೊ. ಬಿ.ಎಸ್. ನಾಗೇಂದ್ರ ಪ್ರಕಾಶ್
ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ

ಪ್ರೊ. ರವಿಶಂಕರ್ ರಾವ್
ಸಂಯೋಜಕರು, ರಾಷ್ಟ್ರೀಯ ವಿಚಾರಸಂಕಿರಣ

ಅಧ್ಯಕ್ಷರು ಹಾಗೂ ಸದಸ್ಯರು
ಕಲಅ, ಬೆಂಗಳೂರು

ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್, ಕಲಅ, ಬೆಂಗಳೂರು





N.G. Pavanje

The National Seminar

The National Seminar on Art and Cultural Heritage of Coastal Karnataka will bring together artists, art scholars and critics, art teachers and students and art lovers on a common platform to discuss the heritage of art in the context of the changing contemporary scenario in the coastal districts of Karnataka. An Exhibition of Art works by young artists will provide a contemporary focus to the Seminar.

The National Seminar is being organised for the first time under the auspices of the N.G. Pavanje Chair in Fine Arts, Mangalore University jointly with Karnataka Lalithkala Academy, in the context of 20 years of the Chair's foundation. It is a befitting tribute to the legacy of the internationally acclaimed artist from Dakshina Kannada, the late N.G. Pavanje, in whose name the Chair was founded by his daughter, Anasuya Pavanje.

Participating Art Scholars and Senior Artists

The Seminar will feature research papers and dialogic conversations by scholars such as Dr. Pundikai Ganapayya Bhat, Dr. Sayeegeetha Hegde, Dr. Nemiraj Shetty, Prof. Varadesh Hiregange, Dr. Ashalatha S. Suvarna, Sri Subhash Basu, Dr. Deepika Shetty, Sri Janardhan Havanje, Sri Manjunath Kamath, Dr. Upadhyaya Moodubelle, Sri N.S. Pattar, Dr. Shalmali Shetty, Dr. Unni Krishnan, Ms. M. Shanthamani, Prof. Suresh Jayaram, apart from senior artists Sri P.S. Punchithaya, Sri Ganesha Somayaji, Sri Ramesh Rao, Sri Ramdas Adyanthaya, Sri Koti Prasad Alva, Sri Rajendra Kedige and others.

N.G. Pavanje

N.G Pavanje (1882-1965) was born in Yelloor village of Dakshina Kannada district and had his early education at Canara High School, Mangaluru. Trained in the nuances of painting at the J.J. School of Art, Mumbai, Sri. Pavanje was sent by H.H. the Maharaja of Mysore, Sri. Krishnaraja Wodeyar to Germany, from where he obtained his doctoral degree in art from the Universities of Berlin and Leipzig. He then spent many years in the service of Mysore at the Chamarajendra Technical Institute, Mysuru where he taught painting to such luminaries as K.K. Hebbar and R.S. Naidu.

Sri Pavanje's excellence as a painter and artist has been widely acknowledged, though he did not run after fame by projecting himself and never held a single exhibition of his own works. His oils as well as water colours show his sensitivity to colour, and the delineation of form in his portraits was almost perfect. His palette did not contain the colours red and black. His specialty was the use of flat brushes, which was the sign of a master painter. Pavanje was founder of the Bangalore Art Society and the guiding spirit behind the establishment of the Chitrakala Parishath at Bengaluru. His paintings today adorn the Jayachamarajendra Art Gallery, the Mysore Palace, the Mythic Society, Bengaluru, the family home, and many private collections all over the world (mostly given away by him as gifts).

No better words can sum up Sri Pavanje's personality than those of his close friend, Dr. Zakir Hussain, former President of India: "Pavanje was a jewel among men, extremely nice and tolerant. Modern art has lost its moorings, but Pavanje had not. He was one of the finest men it has been my privilege to know."

ಸಂಯುಕ್ತ ಕರ್ನಾಟಕ
ಶನಿವಾರ 07 ಏಪ್ರಿಲ್, 2018

ಕಲೆ ವಿಕಾಸಕ್ಕೆ ವಿಚಾರ ಸಂಕಿರಣ

ಸಂ.ಕ. ಸಮಾಚಾರ, ಮಂಗಳೂರು

ಮಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ಲಲಿತಲಾ ಅಕಾಡೆಮಿ, ಎನ್.ಜಿ. ಪಾವಂಜೆ ಲಲಿತ ಕಲಾ ಪೀಠದ ಸಹಯೋಗದಲ್ಲಿ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆ ವಿಕಾಸ ಕುರಿತು ಪ್ರಥಮ ಬಾರಿಗೆ ರಾಷ್ಟ್ರೀಯ ವಿಚಾರ ಸಂಕಿರಣ, ಕರಾವಳಿಯ ಸಮಕಾಲೀನ ಯುವ ಕಲಾವಿದರ ಕಲಾ ಪ್ರದರ್ಶನವು ರೋಶನಿ ನಿಲಯದಲ್ಲಿ ಶುಕ್ರವಾರ ನಡೆಯಿತು.

ವಿಚಾರ ಸಂಕಿರಣದಲ್ಲಿ ಕರಾವಳಿಯ ಪರಂಪರಾನುಗತ ಕಲೆ, ಕಲೆ ಬೆಳೆದು ಬಂದ ಬಗೆ, ಕಲೆ-ಕಾಣ್ಕೆ ಹಾಗೂ ಆಧುನಿಕ ಕಲೆ, ಸಮಕಾಲೀನ ಕಲೆಯ ಸಂದರ್ಭದಲ್ಲಾದ ಬದಲಾವಣೆಯ ಚಿಂತನೆಗಳ ಬಗ್ಗೆ ವಿಚಾರ ಮಂಡಿಸಲ್ಪಟ್ಟಿತು. ನೂರಾರು ಕಲಾವಿದರು, ಕಲಾ ವಿದ್ವಾಂಸರು, ಕಲಾ ವಿಮರ್ಶಕರು, ಕಲಾ ಶಿಕ್ಷಕರು, ಕಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ರಾಷ್ಟ್ರೀಯ ವಿಚಾರ ಸಂಕಿರಣದ ಸಂಯೋಜಕ ಪ್ರೊ. ರವಿಶಂಕರ್ ರಾವ್, ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಮಾಜಿ ಕಾರ್ಯದರ್ಶಿ ಅನುಸೂಯ ಪಾವಂಜೆ, ಕಲಾವಿದ ಪಿ.ಎಸ್. ಪುಂಚಿತ್ತಾಯ, ಆರ್ಟಿಸ್ಟ್ ಫೋರಂ ಅಧ್ಯಕ್ಷ ರಮೇಶ್ ರಾವ್, ಪ್ರೊ.ಎಂ.ಜೆ. ಕಮಲಾಕ್ಷಿ, ಅಕಾಡೆಮಿಯ ರಿಜಿಸ್ಟ್ರಾರ್ ಇಂದ್ರಮ್ಮ ಎಚ್.ವಿ., ಡಾ.ಪುಂಡಿಕಾಯ ಗಣಪಯ್ಯ ಭಟ್, ಮಂಗಳೂರು ವಿವಿ ಕುಲಪತಿ ಡಾ.ಕೆ. ಭೈರಪ್ಪ, ಎನ್.ಜಿ. ಪಾವಂಜೆ ಲಲಿತಾ ಕಲಾಪೀಠದ ಸಂಯೋಜಕ ಪ್ರೊ.ಕೆ.ಕೃಷ್ಣ ಶರ್ಮ, ಕಲಾವಿದರಾದ ರಾಜೇಂದ್ರ ಕೇದಿಗೆ, ಎನ್.ಎಸ್. ಪತ್ತಾರ್, ಸಂತೋಷ್ ಅಂದ್ರಾದೆ ಉಪಸ್ಥಿತರಿದ್ದರು.

ಹೊಸ ದಿಗಂತ
ಶುಕ್ರವಾರ
6 ಏಪ್ರಿಲ್ 2018

ಇಂದು, ನಾಳೆ ರಾಷ್ಟ್ರೀಯ ವಿಚಾರ ಸಂಕಿರಣ, ಕಲಾ ಪ್ರದರ್ಶನ

♦ ಏ. 6 ಮತ್ತು 7ರಂದು ನಗರದ ರೋಶನಿ ನಿಲಯದಲ್ಲಿ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಯುವ ಕಲಾವಿದರ ಕಲಾ ಪ್ರದರ್ಶನ ಆಯೋಜಿಸಲಾಗಿದೆ.

ದಿಗಂತ ವರದಿ: ಮಂಗಳೂರು, ಏ.5

ಮಂಗಳೂರು ವಿಶ್ವವಿದ್ಯಾಲಯ ಎನ್‌ಜಿ ಪಾವಂಜೆ ಲಲಿತಕಲಾ ಪೀಠ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ ಸಹಯೋಗದೊಂದಿಗೆ ಏ. 6 ಮತ್ತು 7ರಂದು ನಗರದ ರೋಶನಿ ನಿಲಯದಲ್ಲಿ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಯುವ ಕಲಾವಿದರ ಕಲಾ ಪ್ರದರ್ಶನ ಆಯೋಜಿಸಲಾಗಿದೆ.

ಏ. 6ರಂದು ಬೆಳಗ್ಗೆ 9.30ಕ್ಕೆ ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ ವಿಚಾರ ಸಂಕಿರಣ ಉದ್ಘಾಟಿಸುವರು. ಹಿರಿಯ ಕಲಾವಿದ ಪಿ.ಎಸ್. ಪುಣಿಂಚಿತ್ತಾಯ ಕಾಸರಗೋಡು, ಉಡುಪಿ ಆರ್ಟಿಸ್ಟ್ ಫೋರಂ ಅಧ್ಯಕ್ಷ ರಮೇಶ್ ರಾವ್ ಅತಿಥಿಯಾಗಿ ಭಾಗವಹಿಸುವರು. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷೆ ಪ್ರೊ. ಎಂ.ಜೆ. ಕಮಲಾಕ್ಷಿ ಆಶಯ ನುಡಿಗಳನ್ನಾಡುವರು. ಹಿರಿಯ ಸಂಶೋಧಕ ಡಾ. ಪುಂಡಿಕಾಯಿ ಗಣಪಯ್ಯ ಭಟ್ ದಿಕ್ಸೂಚಿ ಭಾಷಣ ಮಾಡುವರು. ಮಂಗಳೂರು ವಿವಿ ಕುಲಪತಿ ಪ್ರೊ. ಕೆ. ಭೈರಪ್ಪ ಅಧ್ಯಕ್ಷತೆ ವಹಿಸುವರು ಎಂದು ವಿಚಾರ ಸಂಕಿರಣ ಸಂಯೋಜಕ ಪ್ರೊ. ರವಿಶಂಕರ ರಾವ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ. 7ರಂದು ಸಂಜೆ 4.30ಕ್ಕೆ ಸಮಾರೋಪ ನಡೆಯಲಿದೆ. ಹಿರಿಯ ಕಲಾವಿದ ಗಣೇಶ ಸೋಮಯಾಜಿ, ಮೈಸೂರು ಕಾವಾ ಮಾಜಿ ಡೀನ್ ರಾಮದಾಸ್ ಅಡ್ಯಂತಾಯ, ಕರಾವಳಿ ಚಿತ್ರಕಲಾ ಚಾವಡಿ ಅಧ್ಯಕ್ಷ ಕೋಟಿಪ್ರಸಾದ್ ಆಳ್ವ ಅತಿಥಿಯಾಗಿ ಭಾಗವಹಿಸುವರು. ಒಟ್ಟು 9 ಗೋಷ್ಠಿ ನಡೆಯಲಿದ್ದು, ಕರಾವಳಿಯ ಪರಂಪರಾಗತ ಕಲೆ, ಕಲೆ ಬೆಳೆದು ಬಂದ ಬಗೆ, ಕಲೆ-ಕಾಣ್ಕೆ, ಆಧುನಿಕ ಕಲೆ, ಸಮಕಾಲೀನ ಕಲೆಯ ಸಂದರ್ಭದಲ್ಲಾದ ಬದಲಾವಣೆಯ ಚಿಂತನೆ ಒಳಗೊಂಡಿದೆ. ಕಲಾ ವಿದ್ವಾಂಸರು, ವಿಮರ್ಶಕರು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಕಲಾ ಪ್ರದರ್ಶನದಲ್ಲಿ 29 ಮಂದಿ ಕಲಾವಿದರ ಕಲಾಕೃತಿ ಪ್ರದರ್ಶನಗೊಳ್ಳಲಿದೆ ಎಂದು ವಿವರಿಸಿದರು.

ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯ ರಾಜೇಂದ್ರ ಕೇದಿಗೆ, ಎನ್.ಜಿ. ಪಾವಂಜೆ ಲಲಿತಕಲಾ ಪೀಠ ಸಂಯೋಜಕ ಪ್ರೊ. ಕೆ. ಕೃಷ್ಣ ಶರ್ಮ, ಕಲಾ ಪ್ರಾಧ್ಯಾಪಕ ಎನ್.ಎಸ್. ಪತ್ತಾರ್, ಕಲಾವಿದ ಸಂತೋಷ್ ಅಂದ್ರಾದೆ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ

ಭಾನುವಾರ, 8 ಏಪ್ರಿಲ್ 2018

ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನೆ

■ ವಿಕ ಸುದ್ದಿಲೋಕ ಮಂಗಳೂರು

ಕಲೆಯ ಮೇಲೆ ಆಸಕ್ತಿ ಇರುವವರು ಅದನ್ನು ಮುಂದುವರಿಸಬೇಕು ಮಧ್ಯದಲ್ಲಿ ಬಿಟ್ಟು ಬಿಡದೆ ಕಲೆಯ ಬೆಳವಣಿಗೆಗೆ ಕಾರಣರಾಗಬೇಕು ಎಂದು ಕರ್ನಾಟಕ ಕ್ರಾಫ್ಟ್ಸ್ ಕೌನ್ಸಿಲ್‌ನ ಮಾಜಿ ಕಾರ್ಯದರ್ಶಿಗಳಾದ ಅನಸೂಯ ಪಾವಂಜೆ ಹೇಳಿದರು.

ಅವರು ಶುಕ್ರವಾರ ಮಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಎನ್.ಜಿ.ಪಾವಂಜೆ ಲಲಿತಕಲಾ ಪೀಠದ ಸಂಯುಕ್ತ ಆಶ್ರಯದಲ್ಲಿ ನಡೆದ ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ ಎಂಬ ವಿಷಯದ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಮಂಗಳೂರು ವಿವಿಯ ಕುಲಪತಿ ಪ್ರೊ.ಕೆ.ಭೈರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ಯಾವುದೇ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡರು ಅದರ ಬಗ್ಗೆ ಶ್ರದ್ಧೆ ಇರಬೇಕು ಎಂದರು.

ಹಿರಿಯ ಸಂಶೋಧಕ ಡಾ.ಪುಂಡಿಕ್ಕಾ ಗಣಪಯ್ಯ ಭಟ್ ದಿಕ್ಸೂಚಿ ಭಾಷಣ ಮಾಡಿದರು. ಹಿರಿಯ ಕಲಾವಿದ ಪಿ.ಎಸ್.ಪುಂಚಿತ್ತಾಯ, ಉಡುಪಿ ಆರ್ಟಿಸ್ಟ್ ಫೋರಂ ಅಧ್ಯಕ್ಷ ರಮೇಶ್ ರಾವ್, ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಪ್ರೊ.ಎಂ.ಜೆ.ಕಮಲಾಕ್ಷಿ ಉಪಸ್ಥಿತರಿದ್ದರು. ಸಂಯೋಜಕ ಪ್ರೊ.ರವಿಶಂಕರ್ ಸ್ವಾಗತಿಸಿದರು.

ಯುವ ಕಲಾವಿದರ ಚಿತ್ರ

ಕರಾವಳಿಯ ಯುವ ಆಧುನಿಕ ಚಿತ್ರ ಕಲಾವಿದರಾದ ಶರತ್ ಹಲಿಮಾರ್, ಜನಾರ್ದನ್ ಹಾವಂಜೆ, ಸಂತೋಷ್ ಪೈ, ಓಬ್ಬಯ್ಯ, ವಿಶ್ವಾಸ್ ಎಂ, ವಿಲ್ಸನ್ ಜೆ.ಪಿ. ಕೈಯ್ಯಾರ್, ರವಿ ಎಂ.ಆರ್., ರಾಮಕೃಷ್ಣ ನಾಯಕ್, ಜೀವನ್ ಸಾಲ್ಯಾನ್, ಸಂತೋಷ್ ಅಂದ್ರೆಡ್, ರೇಷ್ಮಾ ಶೆಟ್ಟಿ, ಸಂಪತ್ ಕುಮಾರ್, ವಿಕ್ರಮ್ ಶೆಟ್ಟಿ, ಶೈಲೇಶ್ ಕೋಟ್ಯಾನ್, ಸಿಂಧು ಕಾಮತ್, ಸುಧೀರ್ ಕಾವೂರು, ನಾರಾಯಣ್, ಶಿವಾನಂದ್, ನವೀನ್ ಕುಮಾರ್, ಚೇತನ್ ಕುಮಾರ್, ವಿನೋದ್, ಉಮೇಶ್ ಎನ್., ಉಮೇಶ್ ಎಂ.ವಿ., ಮಿಥುನ್ದಾದ್, ಸುಪ್ರೀತ್ ಬೈಂದೂರು, ಮಂಜು ಬೈಲೂರು, ಜ್ಯೋತ್ಸ್ನಾ, ನಿಶಿತಾ ಪ್ರಭು, ಹರೀಶ್ ಕೊಡಿಯಾಲಬೈಲ್ ಅವರ ಚಿತ್ರಗಳ ಪ್ರದರ್ಶನ ನಡೆಯಿತು.

ಸಂಯುಕ್ತ ಕರ್ನಾಟಕ

ಶುಕ್ರವಾರ | 06 ಏಪ್ರಿಲ್, 2018

ಇಂದಿನಿಂದ ವಿಚಾರಸಂಕಿರಣ

ಮಂಗಳೂರು: ಕರಾವಳಿ ಪರಂಪರೆ, ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆ ವಿಕಾಸ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಯುವ ಕಲಾವಿದರ ಕಲಾ ಪ್ರದರ್ಶನವು ಏ.6, 7ರಂದು ರೋಶನಿ ನಿಲಯದಲ್ಲಿ ನಡೆಯಲಿದೆ ಎಂದು ರಾಷ್ಟ್ರೀಯ ಸಂಕಿರಣದ ಸಂಯೋಜಕ ಪ್ರೊ.ರವಿಶಂಕರ ರಾವ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಲಲಿತಾಕಲಾ ಅಕಾಡೆಮಿ ಮತ್ತು ಎನ್.ಜಿ ಪಾವಂಜೆ ಲಲಿತಕಲಾ ಪೀಠದ ಸಹಭಾಗಿತ್ವದಲ್ಲಿ ನಡೆಯುವ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಕ್ರಾಫ್ಟ್ಸ್ ಕೌನ್ಸಿಲ್ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಭೈರಪ್ಪ ವಹಿಸಲಿದ್ದಾರೆ. ಗೌರವ ಅತಿಥಿಯಾಗಿ ಹಿರಿಯ ಕಲಾವಿದ ಪಿ.ಎಸ್.ಪುಣಿಂಚಿತ್ತಾಯ, ಉಡುಪಿ ಆರ್ಟಿಸ್ಟ್ಸ್ ಫೋರಂ ಅಧ್ಯಕ್ಷ ರಮೇಶ್ ರಾವ್ ಉಪಸ್ಥಿತ-ರಿರಲಿದ್ದಾರೆ. ಹಿರಿಯ ಸಂಶೋಧಕ ಡಾ.ಪುಂಡಿಕೈ ಗಣಪತಿ ಭಟ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದರು. ಎನ್.ಜಿ.ಪಾವಂಜೆ ಲಲಿತಾಕಲಾ ಪೀಠದ ಸಂಯೋಜ-ಕ ಪ್ರೊ.ಕೆ.ಕೃಷ್ಣ ಶರ್ಮ, ರಾಜೇಂದ್ರ ಕೇದಿಗೆ, ಎನ್. ಎಸ್.ಪತ್ತಾರ್, ಸಂತೋಷ್ ಉಪಸ್ಥಿತರಿದ್ದರು.

THE HINDU MANGALURU
FRIDAY, APRIL 6, 2018

Karnataka Lalithkala Academy, Mangalore University: Seminar on art and cultural heritage of coastal Karnataka and evolution of modern art in coastal Karnataka, art exhibition for young artists, Anasuya Pavanje, former secretary, Karnataka Crafts Council, inaugurates, Roshni Nilaya, Valencia, 9.30 a.m.

DECCAN HERALD

Saturday, April 7, 2018

Researcher: preserve local art forms in their originality

MANGALURU: Calling upon art enthusiasts to seriously focus on art appreciation, researcher Dr Pundikai Ganapaiah Bhat stressed on the importance of preserving the indigenous style of architecture and local art forms, without adulterating them with other styles.

He was delivering the keynote address during the national seminar on 'Art and Cultural Heritage of Coastal Karnataka and Evolution of Modern Art in the Coastal District of Karnataka' organised by Mangalore University N G Pavanje chair in fine arts, in association with Karnataka Lalithakala Academy, at Roshni Nilaya here.

Dr Anasuya Pavanje, late artist N G Pavanje's daughter and former secretary of Karnataka Craft Council, inaugurates a national seminar 'Art and Cultural Heritage of Coastal Karnataka and Evolution of Modern Art in the Coastal District of Karnataka' organised at Roshni Nilaya in Mangaluru. DH PHOTO

Bhat opined that the line drawings on the rocks at Gavali, in Udupi, 2,500 years ago, is considered to be the oldest known art work, in Tulunadu.

"In a way, the face paintings in 'Yakshagana' and 'Bhootaradhane' could be termed as the authentic art of the region," he said

"It is very difficult to pinpoint to the authentic architecture of the coastal region as the influence of Kerala architecture and mixture of Chola and Chalukya architectures is seen in the temples of the region." He further noted that the original form of architecture was lost during the renovation of many temples.

Dr Anasuya Pavanje, artist late Narahari Gopalakrishna Pavanje's (N G Pavanje) daughter and former secretary of Karnataka Craft Council, inaugurated the seminar.

She said that though her father had experimented on various medium of art, he was more into realistic art.

Prof M J Kamalakshi, president, Karnataka Lalithakala Academy, delivered the introductory remarks. She said, "Art is not a stagnant entity. Exchange of ideas should take place in the field of art."

Stressing on the need to preserve traditional art forms like Kavi art," she said.

"The Chitrakala Parishat is providing scholarships to budding artists," she added.

Mangalore University Vice Chancellor Prof K Byrappa and Karnataka Lalitakala Academy Registrar Dr Indramma H V were present on the occasion.

Senior artist P S Punchittaya and Artiste Forum (Udupi) President Ramesh Rao were the guests of honour.

Sessions on various topics related to the theme of the seminar, were conducted on the occasion.

An exhibition on modern art was also held.

DH News Service

Life and works of artist Pavanje

Dr Anasuya, recollecting the life and achievements of her father, artist late N G Pavanje, said that Pavanje learnt art at J J School of Art in Mumbai.

As per the wish of the then Maharaja of Mysuru, Krishnaraja Wadiyar IV, Pavanje went to Germany and studied art for about three-and-a half-years and went on to obtain his doctoral degree.

He later served at Chamarajendra Technical Institute, Mysuru, where he trained artists like K K Hebbar and R S Naidu.

His paintings adorn the walls of Jayachamarajendra Art Gallery and Jaganmohana Palace in Mysuru.

Pavanje also pioneered the establishment of Bangalore Art Society and Karnataka Chitrakala Parishath, pioneer organisations of the art, in Bengaluru.

ಶನಿವಾರ | 7 ಏಪ್ರಿಲ್ | 2018
VIJAYAVANI • 7 APRIL 2018

ಯಕ್ಷಗಾನ ದೈವಾರಾಧನೆ ಕಲೆಗಳ ಬಣ್ಣಗಾರಿಕೆ ಅಧ್ಯಯನ

ರೋಶನಿ ನಿಲಯದಲ್ಲಿ ವಿಚಾರ ಸಂಕಿರಣ ಉದ್ಘಾಟಿಸಿ ಹಿರಿಯ ಸಂಶೋಧಕ ಡಾ.ಪುಂಡಿಕ್ಕಾ ಗಣಪಯ್ಯ ಭಟ್ ಆಶಯ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಕರಾವಳಿಯಲ್ಲಿ ಚಿತ್ರಕಲೆಗೆ ಇನ್ನೂರು ವರ್ಷಗಳ ಇತಿಹಾಸವಿದ್ದರೂ, ಹಳೇ ಪರಂಪರೆಯ ಚಿತ್ರಕಲೆಯ ಕುರಿತ ಸರಿಯಾದ ಮಾಹಿತಿ ನಮಗೆ ಸಿಗುತ್ತಿಲ್ಲ ಎಂದು ಹಿರಿಯ ಸಂಶೋಧಕ ಡಾ.ಪುಂಡಿಕ್ಕಾ ಗಣಪಯ್ಯ ಭಟ್ ಹೇಳಿದರು.

▸ ಯುವ ಸಮುದಾಯ ಕಲೆ ಅಧ್ಯಯನದಲ್ಲಿ ತೊಡಗಲಿ

ಮಂಗಳೂರು ವಿಶ್ವವಿದ್ಯಾಲಯ, ಎನ್‌ಜಿ ಪಾವಂಜೆ ಲಲಿತಕಲಾ ಪೀಠ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ ಸಹಯೋಗದಲ್ಲಿ ನಗರದ ರೋಶನಿ ನಿಲಯದಲ್ಲಿ ಶುಕ್ರವಾರ ಎರಡು ದಿನಗಳ ಕಾಲ ನಡೆಯಲಿರುವ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಮೂಡುಬಿದಿರೆಯಲ್ಲಿ ಲಭ್ಯವಿರುವ ತಾಳೆಗರಿಗಳಲ್ಲಿ ಇರುವ ಚಿತ್ರಗಳು ಶ್ರವಣಬೆಳಗೊಳ, ಬಂಕಾಪುರದಿಂದ ಬಂದವು ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಅದೇ ರೀತಿ ನಗರದ ಅಲೋಶಿಯಸ್ ಚಾಪೆಲ್‌ನಲ್ಲಿರುವ ಚಿತ್ರಗಳು ವಿದೇಶಿ ಕಲಾವಿದರು ರಚಿಸಿರುವುದರಿಂದ ಅವು ತುಳುನಾಡಿನ ಚಿತ್ರ ಎಂದು ಪರಿಗಣಿಸುವಂತಿಲ್ಲ. ಆದರೆ, ಜಾನಪದ, ಯಕ್ಷಗಾನ, ಭೂತಾರಾಧನೆ ಬಣ್ಣಗಾರಿಕೆಯನ್ನೂ ಚಿತ್ರಕಲೆ ಎಂದು ಪರಿಗಣಿಸಬಹುದು. ಈ ನಿಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಅಧ್ಯಯನವಾಗಬೇಕು ಎಂದರು.

ನಗರದ ರೋಶನಿ ನಿಲಯದಲ್ಲಿ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅನಸೂಯ ಪಾವಂಜೆ ಮಾತನಾಡಿರು.

ವಿಚಾರ ಸಂಕಿರಣ ಉದ್ಘಾಟಿಸಿದ ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ, ಯುವ ಸಮುದಾಯ ಕಲೆ ಅಧ್ಯಯನ ಕೈಬಿಡಬಾರದು. ಆಧುನಿಕ ಕಲೆ ತನಗೆ ಅರ್ಥವಾಗದಿದ್ದರೂ ಅಲ್ಲಿನ ಬಣ್ಣಗಳ ಸಂಯೋಜನೆ ಉತ್ತಮವಾಗಿದೆ. ತನ್ನ ತಂದೆ ಎನ್.ಜಿ. ಪಾವಂಜೆ ಅವರು ಚಿತ್ರಕಲೆಯ ಬೆಳವಣಿಗೆಗಾಗಿ ಶ್ರಮಿಸಿದವರು. ಮೈಸೂರು ಅರಸರ ಆಸ್ಥಾನದಲ್ಲಿ ಚಿತ್ರಕಲೆ ಬಿಡಿಸುತ್ತಿದ್ದ ಬಗ್ಗೆ ತನಗೆ ನೆನಪುಗಳಿವೆ. ಕಲೆ ಬೆಳೆಯಬೇಕು ಎಂದರು.

ಹಿರಿಯ ಕಲಾವಿದ ಪಿ.ಎಸ್.ಪುಣಿಚಿತ್ತಾಯ ಕಾಸರಗೋಡು, ಉಡುಪಿ ಆರ್ಟಿಸ್ಟ್ ಫೋರಂ ಅಧ್ಯಕ್ಷ ರಮೇಶ್ ರಾವ್ ಅತಿಥಿಗಳಾಗಿದ್ದರು. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷೆ ಪ್ರೊ.ಎಂ.ಜೆ.ಕಮಲಾಕ್ಷಿ ಆಶಯ ನುಡಿಗಳನ್ನಾಡಿದರು. ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ ಅಧ್ಯಕ್ಷತೆ ವಹಿಸಿದ್ದರು. ಲಲಿತಕಲಾ ಅಕಾಡೆಮಿ ರಿಜಿಸ್ಟ್ರಾರ್ ಇಂದ್ರಮ್ಮ, ಎನ್.ಜಿ.ಪಾವಂಜೆ ಲಲಿತಕಲಾ ಪೀಠ ಸಂಯೋಜಕ ಪ್ರೊ. ಕೆ.ಕೃಷ್ಣ ಶರ್ಮ ಉಪಸ್ಥಿತರಿದ್ದರು.

ವಿಚಾರ ಸಂಕಿರಣ ಸಂಯೋಜಕ ಪ್ರೊ.ರವಿಶಂಕರ ರಾವ್ ಸ್ವಾಗತಿಸಿದರು. ಡಾ.ನೇಮಿರಾಜ್ ಪ್ರಸ್ತಾವಿಸಿದರು.

ವಿಚಾರ ಸಂಕಿರಣ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ 29 ಮಂದಿ ಕಲಾವಿದರ ಕಲಾಕೃತಿ ಪ್ರದರ್ಶನಗೊಂಡಿತು. ಎರಡು ದಿನಗಳ ಕಾಲ ವಿವಿಧ ಗೋಷ್ಠಿಗಳು ನಡೆಯಲಿದ್ದು, ಕಲಾವಿದರು ವಿವಿಧ ವಿಚಾರಗಳ ಬಗ್ಗೆ ವಿಷಯ ಮಂಡಿಸಲಿದ್ದಾರೆ. ಶನಿವಾರ ಸಾಯಂಕಾಲ ಸಮಾರೋಪ ಸಮಾರಂಭ ನಡೆಯಲಿದೆ.

ಹೊಸ ದಿಗಂತ
ಶನಿವಾರ
7 ಏಪ್ರಿಲ್ 2018

ಕರಾವಳಿ ಪರಂಪರೆ, ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ ವಿಷಯದ ವಿಚಾರಸಂಕಿರಣ

ಯಕ್ಷಗಾನ, ಭೂತ ಬಣ್ಣಗಾರಿಕೆ ಬಗ್ಗೆ ಅಧ್ಯಯನ ಅಗತ್ಯ

▸ ದಿಗಂತ ವರದಿ : ಮಂಗಳೂರು, ಏ.6

ಕರಾವಳಿಯಲ್ಲಿ ಪರಂಪರೆಯ ಹಳೆಯ ಚಿತ್ರಕಲೆಯ ಬಗ್ಗೆ ಮಾಹಿತಿ ದೊರೆಯುತ್ತಿಲ್ಲ, ಚಿತ್ರಕಲೆಗೆ ಕರಾವಳಿಯಲ್ಲಿ 200 ವರ್ಷಗಳ ಇತಿಹಾಸವಿದೆ. ಆದರೆ, ಜಾನಪದ, ಯಕ್ಷಗಾನ, ಭೂತಾರಾಧನೆ ಬಣ್ಣಗಾರಿಕೆಯನ್ನೂ ಚಿತ್ರಕಲೆ ಎಂದು ಪರಿಗಣಿಸಬಹುದು. ಈ ನಿಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಅಧ್ಯಯನ ಆಗಲಿ ಎಂದು ಹಿರಿಯ ಸಂಶೋಧಕ ಡಾ. ಪುಂಡಿಕಾಯಿ ಗಣಪಯ್ಯ ಭಟ್ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯ ಎನ್‌ಜಿ ಪಾವಂಜೆ ಲಲಿತಕಲಾ ಪೀಠ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ ಸಹಯೋಗದೊಂದಿಗೆ ನಗರದ ರೋಶನಿ ನಿಲಯದಲ್ಲಿ ಶುಕ್ರವಾರ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿತ್ರಕಲೆಯ ಬಗ್ಗೆ ಎಲ್ಲಿಯೂ ಮಾಹಿತಿ ಲಭ್ಯವಿಲ್ಲ. ಮೂಡುಬಿದರೆಯಲ್ಲಿ ಲಭ್ಯವಿರುವ ತಾಳೆಗರಿಗಳಲ್ಲಿ ಇರುವ ಚಿತ್ರಗಳು ಶ್ರವಣಬೆಳಗೊಳ, ಬಂಕಾಪುರದಿಂದ ಬಂದವು ಎಂಬ ಬಗ್ಗೆ ಚರ್ಚೆ ಇದೆ. ಮಂಗಳೂರಿನ ಅಲೋಶಿಯಸ್ ಚಾಪೆಲ್‌ನಲ್ಲಿರುವ ಚಿತ್ರಗಳನ್ನು ವಿದೇಶಿ ಚಿತ್ರಕಾರ ಬಿಡಿಸಿದ ಕಾರಣ ಅದನ್ನು ತುಳುನಾಡಿನ ಚಿತ್ರ ಎಂದು ಪರಿಗಣಿಸುವಂತಿಲ್ಲ. ಆದರೆ, ಜಾನಪದ, ಯಕ್ಷಗಾನ, ಭೂತಾರಾಧನೆಯಲ್ಲಿ ಚಿತ್ರಕಾರ ಮತ್ತು ಕ್ಯಾನ್ವಾಸ್ ಒಟ್ಟಿಗೇ ಆಗಿ ಬಣ್ಣಗಾರಿಕೆ ನಡೆಸುವುದು ಚಿತ್ರಕಲೆಯ ಪ್ರಾಕಾರವೇ ಆಗಿದೆ. ಕರಾವಳಿಯಲ್ಲಿ ಆಧುನಿಕ ಕಲೆಯ ವಿಕಾಸ 2 ಶತಮಾನಗಳ ಹಿಂದಿಂದ ನಡೆದ ಬೆಳವಣಿಗೆ. ವಿಚಾರ ಸಂಕಿರಣ ಮೂಲಕ ಈ ಕುರಿತಾದ ಅಧ್ಯಯನ ಗ್ರಂಥ ರಚನೆಗೆ ಪ್ರೇರಣೆ ಆಗಲಿ ಎಂದರು.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ, ತನ್ನ ತಂದೆ ಎನ್‌ಜಿ ಪಾವಂಜೆ ಅವರು ಚಿತ್ರಕಲೆಯ ಬೆಳವಣಿಗೆಗಾಗಿ ಶ್ರಮಿಸಿದವರು. ಮೈಸೂರು ಅರಸರ ಆಸ್ಥಾನದಲ್ಲಿ ಚಿತ್ರಕಲೆ ಬಿಡಿಸುತ್ತಿದ್ದ ಬಗ್ಗೆ ತನಗೆ ನೆನಪುಗಳಿವೆ. ಕಲೆ ಬೆಳೆಯಬೇಕು. ಯುವ ಸಮುದಾಯ ಕಲೆ ಅಧ್ಯಯನ ಕೈಬಿಡಬಾರದು. ಆಧುನಿಕ ಕಲೆ ತನಗೆ ಅರ್ಥವಾಗದಿದ್ದರೂ ಅಲ್ಲಿನ ಬಣ್ಣಗಳ ಸಂಯೋಜನೆ ಉತ್ತಮವಾಗಿದೆ ಎಂದರು.

ಹಿರಿಯ ಕಲಾವಿದ ಪಿ.ಎಸ್. ಪುಣಿಚಿತ್ತಾಯ ಕಾಸರಗೋಡು, ಉಡುಪಿ ಆರ್ಟಿಸ್ಟ್ಸ್ ಫೋರಂ ಅಧ್ಯಕ್ಷ ರಮೇಶ್ ರಾವ್ ಅತಿಥಿಯಾಗಿದ್ದರು. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷೆ ಪ್ರೊ. ಎಂ.ಜೆ. ಕಮಲಾಕ್ಷಿ ಆಶಯ ನುಡಿಗಳನ್ನಾಡಿದರು. ಮಂಗಳೂರು ವಿವಿ ಕುಲಪತಿ ಪ್ರೊ. ಕೆ. ಭೈರಪ್ಪ ಅಧ್ಯಕ್ಷತೆ ವಹಿಸಿದ್ದರು. ಲಲಿತಕಲಾ ಅಕಾಡೆಮಿ ರಿಜಿಸ್ಟ್ರಾರ್ ಇಂದ್ರಮ್ಮ, ಎನ್.ಜಿ. ಪಾವಂಜೆ ಲಲಿತಕಲಾ ಪೀಠ ಸಂಯೋಜಕ ಪ್ರೊ. ಕೆ. ಕೃಷ್ಣಶರ್ಮ ಉಪಸ್ಥಿತರಿದ್ದರು.

ವಿಚಾರ ಸಂಕಿರಣ ಸಂಯೋಜಕ ಪ್ರೊ. ರವಿಶಂಕರ ರಾವ್ ಸ್ವಾಗತಿಸಿದರು. ಡಾ. ನೇಮಿರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಳಿಕ ವಿವಿಧ ಗೋಷ್ಠಿಯು ನಡೆಯಿತು. ವಿಚಾರ ಸಂಕಿರಣ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ 29 ಮಂದಿ ಕಲಾವಿದರ ಕಲಾಕೃತಿ ಪ್ರದರ್ಶನಗೊಂಡಿತು. ಏ. 7ರಂದು ಸಂಜೆ 4.30ಕ್ಕೆ ಸಮಾರೋಪ ನಡೆಯಲಿದೆ.

ದಿಗಂತ ಚಿತ್ರ

ಕರಾವಳಿಯಲ್ಲಿ ಪರಂಪರೆಯ ಹಳೆಯ ಚಿತ್ರಕಲೆಯ ಬಗ್ಗೆ ಮಾಹಿತಿ ದೊರೆಯುತ್ತಿಲ್ಲ. ಚಿತ್ರಕಲೆಗೆ ಕರಾವಳಿಯಲ್ಲಿ 200 ವರ್ಷಗಳ ಇತಿಹಾಸವಿದೆ. ಆದರೆ, ಜಾನಪದ, ಯಕ್ಷಗಾನ, ಭೂತಾರಾಧನೆ ಬಣ್ಣಗಾರಿಕೆಯನ್ನೂ ಚಿತ್ರಕಲೆ ಎಂದು ಪರಿಗಣಿಸಬಹುದು. ಈ ನಿಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಅಧ್ಯಯನ ಆಗಲಿ.

■ ಡಾ. ಪುಂಡಿಕಾಯಿ ಗಣಪಯ್ಯ ಭಟ್

THE HINDU
SATURDAY, APRIL 7, 2018

Creativity on canvas

Vice-Chancellor of Mangalore University K. Byrappa looking at a painting during an art exhibition of youth contemporary artists of coastal region, in Mangaluru on Friday. This was held as part of a seminar on 'Art and Cultural Heritage of Coastal Karnataka and Evolution of Modern Art in Coastal District of Karnataka'. The exhibition was organised by the university and Karnataka Lalithakala Academy. • H.S. MANJUNATH

ಪ್ರಜಾವಾಣಿ ಶನಿವಾರ • ಏಪ್ರಿಲ್ 7, 2018

ರಾಷ್ಟ್ರಮಟ್ಟದ ವಿಚಾರ ಸಂಕಿರಣ

ಚಿತ್ರಕಲೆಯಿಂದ ಮೊದಲ ಸಂವಹನ ಆರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಎನ್.ಜಿ. ಪಾವಂಜೆ ಲಲಿತಕಲಾ ಪೀಠದ ವತಿಯಿಂದ ಆಯೋಜಿಸಿದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ ಉದ್ಘಾಟಿಸಿದರು.

ಮಂಗಳೂರು: 'ಮನುಷ್ಯ ಭಾಷೆ, ಮಾತು ಕಲಿಯುವ ಮೊದಲು ಸಂವಹನ ಮಾಡಲು ಪ್ರಾರಂಭಿಸಿದ್ದು ಚಿತ್ರಕಲೆಯ ಮೂಲಕ; ಕರಾವಳಿ ಪ್ರದೇಶದಲ್ಲಿ ಮನುಷ್ಯನು ಚಿತ್ರಕಲೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದ ಕುರುಹುಗಳು ಕಂಡುಬರುವುದಿಲ್ಲ' ಎಂದು ಸಂಶೋಧಕ ಪ್ರೊ. ಪುಂಡಿಕಾಯಿ ಗಣಪಯ್ಯ ಭಟ್ ತಿಳಿಸಿದರು.

ಮಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಎನ್.ಜಿ. ಪಾವಂಜೆ ಲಲಿತಕಲಾ ಪೀಠದ ವತಿಯಿಂದ ಶುಕ್ರವಾರ ರೋಶನಿ ನಿಲಯದಲ್ಲಿ ಆಯೋಜಿಸಿದ್ದ 'ಕರಾವಳಿ ಪರಂಪರೆ ಮತ್ತು ಕಲೆ, ಕರಾವಳಿ ಜಿಲ್ಲೆಯಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಅವರು ದಿಕ್ಸೂಚಿ ಭಾಷಣದಲ್ಲಿ ಮಾತನಾಡಿದರು.

'ಉಡುಪಿಯ ಗಾಗೋಳಿ ಪ್ರದೇಶದಲ್ಲಿ ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ಮನುಷ್ಯರು ಬಂಡೆಯಲ್ಲಿ ರಚಿಸಿದ ಗೀರು ಚಿತ್ರಗಳು ಕಂಡುಬಂದಿವೆ. ಆ ಆಧಾರದ ಮೇಲೆ ಕರಾವಳಿಯಲ್ಲಿ ಈ ಕಾಲದಿಂದ ಚಿತ್ರಕಲಾ ಇತಿಹಾಸ ಪ್ರಾರಂಭಿಸಬಹುದು. ಕರಾವಳಿ ಕರ್ನಾಟಕದ ಆರಂಭಿಕ ದೇವಸ್ಥಾನಗಳು ಅತ್ಯಂತ ಸರಳ ರಚನೆಯ ದೇವಾಲಯಗಳು. ಗೋಡೆಯಲ್ಲಿ ಯಾವುದೇ ಶಿಲ್ಪ ಕಲೆಗಳು ಇರುವುದಿಲ್ಲ, ತಾಮ್ರ ಅಥವಾ ಹಂಚಿನ ಚಾವಣಿಯ ರಚನೆಯಿಂದ ಕೂಡಿದ ದೇವಾಲಯಗಳಿದ್ದವು. ಇವತ್ತಿನ ದೇವಾಲಯಗಳು ಮೂಲ ಸ್ವರೂಪದಲ್ಲಿಲ್ಲ. ಇವು ರೂಪಾಂತರಗೊಂಡ ಹೊಸ ರೀತಿಯ ದೇವಾಲಯಗಳಾಗಿವೆ' ಎಂದರು.

ವಿಚಾರ ಸಂಕಿರಣವನ್ನು ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ ಉದ್ಘಾಟಿಸಿದರು. ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ. ಭೈರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಲಾವಿದ ಪಿ.ಎಸ್.ಪುಣಿಂಚಿತ್ತಾಯ, ಆರ್ಟಿಸ್ಟ್ ಫೋರಂನ ಅಧ್ಯಕ್ಷ ರಮೇಶ್ ರಾವ್, ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಇಂದ್ರಮ್ಮ ಎಚ್.ವಿ ಉಪಸ್ಥಿತರಿದ್ದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷೆ ಪ್ರೊ. ಎಂ.ಜೆ. ಕಮಲಾಕ್ಷಿ ಆಶಯ ಭಾಷಣ ಮಾಡಿದರು. ಕಾರ್ಯಕ್ರಮ ಸಂಯೋಜಕ ಪ್ರೊ. ರವಿಶಂಕರ್ ರಾವ್ ಸ್ವಾಗತಿಸಿದರು. ನೇಮಿರಾಜ್ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಮುಖ್ಯಾಂಶಗಳು

- 'ಕರಾವಳಿ ಪರಂಪರೆ ಮತ್ತು ಕಲೆ, ಕರಾವಳಿ ಜಿಲ್ಲೆಯಲ್ಲಿ ಆಧುನಿಕ ಕಲೆಯ ವಿಕಾಸ'
- ಉಡುಪಿಯ ಗಾಗೋಳಿಯ ಬಂಡೆಯಲ್ಲಿ ಪ್ರಾಚೀನ ಮನುಷ್ಯರ ಗೀರು ಚಿತ್ರ
- ಕರಾವಳಿ ಪ್ರದೇಶದಲ್ಲಿ ಮನುಷ್ಯನು ಚಿತ್ರಕಲೆ ಆಸಕ್ತಿ ಹೊಂದಿದ ಕುರುಹು ಇಲ್ಲ

ಉದಯವಾಣಿ ಸುದಿನ
ಮಂಗಳೂರು ಸಮಾಚಾರ
ಏಪ್ರಿಲ್ 7 | 2018 | ಶನಿವಾರ

ಕಲಾ ಪ್ರಕಾರಗಳ ಅಧ್ಯಯನಕ್ಕೆ ಆಸ್ಥೆ ವಹಿಸಲಿ: ಅನಸೂಯ ಪಾವಂಜೆ

ಮಹಾನಗರ, ಏ. 6: ಯುವ ಸಮುದಾಯವು ಕಲಾ ಪ್ರಕಾರಗಳ ಅಧ್ಯಯನದ ಬಗ್ಗೆ ವಿಶೇಷ ಆಸ್ಥೆ ವಹಿಸುವುದು ಇಂದಿನ ಅಗತ್ಯ ಎಂದು ಕರ್ನಾಟಕ ಕ್ರಾಫ್ಟ್ ಕೌನ್ಸಿಲ್‌ನ ಮಾಜಿ ಕಾರ್ಯದರ್ಶಿ ಅನಸೂಯ ಪಾವಂಜೆ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯ, ಎನ್‌ಜಿ ಪಾವಂಜೆ ಲಲಿತಕಲಾ ಪೀಠ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ ಸಹಯೋಗದಲ್ಲಿ ನಗರದ ರೋಶನಿ ನಿಲಯದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ 'ಕರಾವಳಿ ಪರಂಪರೆ ಮತ್ತು ಕಲೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಆಧುನಿಕ ಕಲೆಯ ವಿಕಾಸ' ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ರೋಶನಿ ನಿಲಯದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಲಾಯಿತು.

ಕಲೆ ಬೆಳೆಯಲಿ

ಆಧುನಿಕ ಕಲೆ ತನಗೆ ಅರ್ಥವಾಗದಿದ್ದರೂ ಅಲ್ಲಿನ ಬಣ್ಣಗಳ ಸಂಯೋಜನೆ ಉತ್ತಮವಾಗಿದೆ. ತನ್ನ ತಂದೆ ಎನ್‌ಜಿ ಪಾವಂಜೆ ಅವರು ಚಿತ್ರಕಲೆಯ ಬೆಳವಣಿಗೆಗಾಗಿ ಶ್ರಮಿಸಿದವರು. ಮೈಸೂರು ಅರಸರ ಆಸ್ಥಾನದಲ್ಲಿ ಚಿತ್ರಕಲೆ ಬಿಡಿಸುತ್ತಿದ್ದ ಬಗ್ಗೆ ತನಗೆ ನೆನಪುಗಳಿವೆ. ಕಲೆ ಬೆಳೆಯಬೇಕು ಎಂದರು.

ಅಧ್ಯಯನ ನಡೆಯಲಿ

ಹಿರಿಯ ಸಂಶೋಧಕ ಡಾ। ಪುಂಡಿಕ್ಕಾ ಗಣಪಯ್ಯ ಭಟ್ ಮಾತನಾಡಿ, ಕರಾವಳಿಯಲ್ಲಿ ಚಿತ್ರಕಲೆಗೆ ಇನ್ನೂರು ವರ್ಷಗಳ ಇತಿಹಾಸವಿದ್ದರೂ, ಪರಂಪರೆಯ ಚಿತ್ರಕಲೆಯ ಕುರಿತ ಸರಿಯಾದ ಮಾಹಿತಿ ನಮಗೆ ಸಿಗುತ್ತಿಲ್ಲ. ಮೂಡಬಿದಿರೆಯಲ್ಲಿ ಲಭ್ಯವಿರುವ ತಾಳೆಗರಿಗಳಲ್ಲಿ ಇರುವ ಚಿತ್ರಗಳು ಶ್ರವಣಬೆಳಗೊಳ, ಬಂಕಾಪುರದಿಂದ ಬಂದವುಗಳು ಎಂಬ ಬಗ್ಗೆ ಚರ್ಚೆಯಾಗುತ್ತಿದೆ. ಜಾನಪದ, ಯಕ್ಷಗಾನ, ಭೂತಾರಾಧನೆ‌ಬಣ್ಣಗಾರಿಕೆಯನ್ನೂ ಚಿತ್ರಕಲೆ ಎಂದು ಪರಿಗಣಿಸಬಹುದು. ಈ ನಿಟ್ಟಿನಲ್ಲಿ ಇನ್ನಷ್ಟು ಹೆಚ್ಚಿನ ಅಧ್ಯಯನವಾಗಬೇಕು ಎಂದರು.

ಹಿರಿಯ ಕಲಾವಿದ ಪಿ.ಎಸ್. ಪುಣಿಂಚಿತ್ತಾಯ ಕಾಸರಗೋಡು, ಉಡುಪಿ ಆರ್ಟಿಸ್ಟ್ ಫೋರಂ ಅಧ್ಯಕ್ಷ ರಮೇಶ್ ರಾವ್ ಅತಿಥಿಗಳಾಗಿದ್ದರು. ರಾಜ್ಯ ಲಲಿತಕಲಾ ಅಕಾಡೆಮಿ ಅಧ್ಯಕ್ಷೆ ಪ್ರೊ। ಎಂ.ಜೆ. ಕಮಲಾಕ್ಷಿ ಆಶಯ ನುಡಿಗಳನ್ನಾಡಿದರು.

ಮಂಗಳೂರು ವಿವಿ ಕುಲಪತಿ ಪ್ರೊ। ಕೆ. ಭೈರಪ್ಪ ಅಧ್ಯಕ್ಷತೆ ವಹಿಸಿದ್ದರು.

ಲಲಿತಕಲಾ ಅಕಾಡೆಮಿ ರಿಜಿಸ್ಟ್ರಾರ್ ಇಂದ್ರಮ್ಮ, ಎನ್.ಜಿ. ಪಾವಂಜೆ ಲಲಿತಕಲಾ ಪೀಠ ಸಂಯೋಜಕ ಪ್ರೊ। ಕೆ. ಕೃಷ್ಣ ಶರ್ಮ ಮುಖ್ಯ ಅತಿಥಿಗಳಾಗಿದ್ದರು.

ವಿಚಾರ ಸಂಕಿರಣ ಸಂಯೋಜಕ ಪ್ರೊ। ರವಿಶಂಕರ ರಾವ್ ಸ್ವಾಗತಿಸಿ, ಡಾ। ನೇಮಿರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಲಾಕೃತಿ ಪ್ರದರ್ಶನ

ವಿಚಾರ ಸಂಕಿರಣ ಅಂಗವಾಗಿ ನಡೆದ ಕಲಾ ಪ್ರದರ್ಶನದಲ್ಲಿ 29 ಮಂದಿ ಕಲಾವಿದರ ಕಲಾಕೃತಿ ಪ್ರದರ್ಶನಗೊಂಡಿತು. ಎರಡು ದಿನಗಳ ಕಾಲ ವಿವಿಧ ಗೋಷ್ಠಿಗಳು ನಡೆಯಲಿದ್ದು, ಕಲಾವಿದರು ವಿವಿಧ ವಿಚಾರಗಳ ಬಗ್ಗೆ ವಿಷಯ ಮಂಡಿಸಲಿದ್ದಾರೆ. ಶನಿವಾರ ಸಂಜೆ ಸಮಾರೋಪ ನಡೆಯಲಿದೆ. ಕರಾವಳಿಯ ಯುವ ಆಧುನಿಕ ಚಿತ್ರ ಕಲಾವಿದರ ಚಿತ್ರ ಪ್ರದರ್ಶನ ಇಲ್ಲಿದೆ.